ವಿಷಯ: ವಿಜಾಪುರ ಜಿಲ್ಲೆಯಲ್ಲಿ ಕೊಲೆ, ದರೋಡೆ, ಸುಲಿಗೆ ಪ್ರಕರಣಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1565 (2344)

ಶ್ರೀ ಬಸವನಗೌಡ ಪಾಟೀಲ್(ವಿಜಾಪುರ್):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ದಿನಾಂಕ 1-1-95ರಿಂದ ಜುಲೈ 1995ರ ವರೆವಿಗೆ ನಡೆದ ಕೊಲೆ ದರೋಡೆ, ಸುಲಿಗೆ, ಪ್ರಕರಣಗಳು ಎಷ್ಟು ಹಾಗೂ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ಈ ಅವಧಿಯಲ್ಲಿ ವಿಜಾಪುರ ನಗರದಲ್ಲಿ ದಾಖಲಾದ ಪೋಲಿಸ್ ಪ್ರಕರಣಗಳೆಷ್ಟು; ವಿವಿಧ ಠಾಣೆಗಳಲ್ಲಿ ದಾಖಲಾಗಿರುವ ಕೊಲೆ ದರೋಡೆ, ಸುಲಿಗೆ ಪ್ರಕರಣಗಳ ಬಗ್ಗೆ ವಿವರ ನೀಡುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಗೃಹ ಸಚಿವರು):-

ಅ) ಕೊಲೆ--75
ದರೋಡೆ--14
ಸುಲಿಗೆ --14

ಈ ಪ್ರಕರಣಗಳನ್ನು ತಡೆಗಟ್ಟಲು ರಾತ್ರಿ ಗಸ್ತನ್ನು ಅತಿಯಾಗಿ ಬಿಗಿಗೊಳಿಸಿ ಜಾಗರೂಕತೆಯಿಂದ ಗಸ್ತು ಮಾಡಿಸಲಾಗುತ್ತಿದೆ. ಜಿಲ್ಲೆಯಲ್ಲಿ ಕ್ರೈಂ ಸ್ಕ್ವಾಡ್‌ಅನ್ನು ರಚಿಸಿ, ಪ್ರಕರಣಗಳನ್ನು ಪತ್ತೆ ಹಚ್ಚುವ ಕಾರ್ಯ ಚುರುಕಾಗಿ ನಡೆದಿದೆ. ಅಲ್ಲದೆ ಶಸ್ತ್ರಧಾರಿಗಳಿಂದ ರಾತ್ರಿ ಗಸ್ತು ಕಾರ್ಯ ಚುರುಕುಗೊಳಿಸಿ ಸಾರ್ವಜನಿಕರು ನೆಮ್ಮದಿಯಿಂದ ಇರುವಂತೆ ಮಾಡಲಾಗಿದೆ.

ಆ) ಕೊಲೆ- 3
ದರೋಡೆ- 2
ಸುಲಿಗೆ- 8
(ವಿವರಗಳನ್ನು ಅನುಬಂಧ - ಅ ದಲ್ಲಿ ಲಗತ್ತಿಸಿದೆ.)

ವಿಷಯ :- ವಿಜಾಪುರ ನಗರದಲ್ಲಿ ಮಹಿಳಾ ಪೋಲೀಸ್ ಠಾಣೆ ಪ್ರಾರಂಭ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1566(1653)

ಶ್ರೀ ಬಸವನಗೌಡ ಪಾಟೀಲ್(ವಿಜಾಪುರ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ನಗರದಲ್ಲಿ ಮಹಿಳಾ ಪೋಲೀಸ್ ಠಾಣೆ ಪ್ರಾರಂಭಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಜಿಲ್ಲೆಯಲ್ಲಿ ದಿನೇದಿನೇ ಹೆಚ್ಚುತ್ತಿರುವ ಮಹಿಳೆಯರ ಮೇಲಿನ ದೌರ್ಜನ್ಯ ಅತ್ಯಾಚಾರ, ದರೋಡೆ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು):-

ಅ) ಪ್ರತಿ ಜಿಲ್ಲಾ ಕೇಂದ್ರದಲ್ಲಿ ಒಂದು ಮಹಿಳಾ ಪೋಲೀಸ್ ಸ್ಟೇಶನ್ ಸ್ಥಾಪಿಸುವ ಉದ್ದೇಶ